





ಭಕ್ತಿರಸದ ಉತ್ಕಟತೆ ತನ್ಮಯತೆಗಳನ್ನು, ಕೊರಗು ಕಳವಳಗಳನ್ನು ತನ್ನ ವಿಶಿಷ್ಟವಾದ ಶೈಲಿಯಲ್ಲಿ ವ್ಯಕ್ತಪಡಿಸಿ, ಅದ್ಭುತವಾದ ಪ್ರತಿಭಾಶಕ್ತಿಯಿಂದ ಕಾವ್ಯರಚನೆಯ ಹೊಸ ಪ್ರಪಂಚವೊಂದಕ್ಕೆ ಅಸ್ತಿಭಾರವನ್ನು ಹಾಕಿದ ಅಪೂರ್ವ ಕವಿ ಹರಿಹರ. ಶಿವನನ್ನು, ಶಿವಶರಣರನ್ನು ಸ್ತುತಿಸಲು ಮಾತ್ರ ಕಾವ್ಯಶಕ್ತಿಯನ್ನು ಬಳಸಬೇಕಲ್ಲದೆ, 'ಮನುಜರ ಮೇಲೆ, ಸಾವವರ ಮೇಲೆ', ಇಂದು ಇದ್ದು ನಾಳೆ ಇಲ್ಲದಿರುವ ಮನುಜರನ್ನು ಇಂದ್ರ-ಚಂದ್ರರೆಂದು ಪೊಗಳಿ ಪಾಡುವುದಕ್ಕಲ್ಲ ಎಂಬ ನಿಲುವನ್ನು ತಾಳಿದ್ದ ಭಕ್ತಾಗ್ರಣಿ ಈತ.

ಹದಿಮೂರನೆಯ ಶತಮಾನದ ಪೂರ್ವಾರ್ಧದಲ್ಲಿ ಹಂಪೆಯಲ್ಲಿದ್ದ ಹರಿಹರನು ಪಂಪಾಕ್ಷೇತ್ರದ ವಿರೂಪಾಕ್ಷನ ಪರಮ ಭಕ್ತ. ಈತ ಹೊಯ್ಸಳ ಎರಡನೆಯ ವೀರಬಲ್ಲಾಳನ (೧೧೭೩-೧೨೨೦) ಆಸ್ಥಾನದಲ್ಲಿ ಕರಣಿಕನಾಗಿದ್ದಿರಬಹುದು. ನೃಪಸೇವೆ, ರಾಜಕಾರಣದ ಉಸುಗಿನೊಳಗಿನ ಲೌಕಿಕ ಜೀವನದ ಆಡಂಬರಗಳು ತಂದ ಜುಗುಪ್ಸೆ ಅವನ ಮಾತುಗಳಲ್ಲಿ ವ್ಯಕ್ತಗೊಂಡದ್ದನ್ನು ನಾವು ಕಾಣಬಹುದು:

ಪೋಗೆನೆ ಪೋಪ ಬಾರೆಲವೊ
ಬಾರೆನೆ ಜೀಯ ಹಸಾದವೆಂದು ಬೇ
ಳಾಗುತೆ ಬರ್ಪ ಮಾಣೆಲವೊ
ಸುಮ್ಮನಿರೆಂದೊಡೆ ಸುಮ್ಮನಿರ್ಪ ಮ ।
ತ್ತಾಗಳೆ ಝುಂಕಿಸಲ್ ನಡುಗಿ ಬೀಳುವ
ಸೇವೆಯ ಕಷ್ಟವೃತ್ತಿಯಂ
ನೀಗಿದೆನಿಂದು ನಿಮ್ಮ ದೆಸೆಯಿಂ
ಕರುಣಾಕರ ಹಂಪೆಯಾಳ್ದನೆ ॥

ಈ ಸಂಸಾರದ ದೈನ್ಯತೆಯ ಜೀವನದಿಂದ ಅಂತರಂಗದಲ್ಲಿ ಸಾಕಷ್ಟು ತೊಳಲಾಟವನ್ನು ಅನುಭವಿಸಿ, ಬದುಕಿಗೆ ನಿಜವಾದ ಭದ್ರತೆಯನ್ನು ನೀಡುವ ಬೆಳಕನ್ನು ತನ್ನ ಇಷ್ಟದೈವವಾದ ವಿರೂಪಾಕ್ಷನಲ್ಲಿ ಕಂಡ ಬಗೆಯನ್ನು ಅವನ ಮಾತುಗಳಲ್ಲೇ ನೋಡಬಹುದು:

ನರರಂ ಸೇವಿಪ ಜೀಯಜೀಯೆನುತಮಿರ್ಪೇನೆಂದೊಡಂ ದೈನ್ಯಮು
ಬ್ಬರಿಸುತ್ತುಂ ತನುಗುಂದಿಯುಂ ತನಗೆ
ತಾನೆಂತಕ್ಕೆಯುಂ ಬೇಡುತಿ ।
ರ್ಪಿರವಂ ಸುಟ್ಟು ಬಿಸುಟ್ಟು ಭಕ್ತಿಯೊಳಗೋಲಾಡಲ್
ಮನಂದಂದು ಶಂ
ಕರನಂ ಶಾಶ್ವತನಂ ಕೃಪಾಜಲಧಿಯಂ ಕಂಡೆಂ ವಿರೂಪಾಕ್ಷನಂ ॥

ಹರಿಹರನು ತನ್ನ ಬಹುತೇಕ ಕಾವ್ಯರಚನೆಯನ್ನು 'ರಗಳೆ' ಎಂಬ ಛಂದಸ್ಸಿನಲ್ಲಿ ಮಾಡಿದ್ದಾನೆ. ಪ್ರಾಚೀನ ಕಾವ್ಯಶಾಸ್ತ್ರಾದಿಗಳಲ್ಲಿ ಮೂಲೆಗುಂಪಾಗಿದ್ದ 'ರಗಳೆ' ಎಂಬ ಮಾತ್ರಾಗಣಬದ್ಧವಾದ ವಿಶಿಷ್ಟ ಛಂದೋರೂಪದ ಈ ಪದ್ಯಜಾತಿಗೆ ಜೀವಕೊಟ್ಟು ತನ್ನ ಪ್ರತಿಭಾಶಕ್ತಿಯಿಂದ ಆ ಕಾವ್ಯಪ್ರಕಾರಕ್ಕೆ ಎಂದಿಗೂ ಅಳಿಯದ ಮಾನ್ಯತೆಯನ್ನು ಹರಿಹರ ದೊರಕಿಸಿಕೊಟ್ಟಿದ್ದಾನೆ. ಪುರಾತನ ಶೈವ ಸಂತರು, ಬಸವಣ್ಣ, ದೇವರ ದಾಸಿಮಯ್ಯ, ಪ್ರಭುದೇವ ಮುಂತಾದ ಶಿವಶರಣರ ಜೀವನ ನಿರೂಪಣೆಗಳು ಈತನ ನೂರಾರು ರಗಳೆಗಳಲ್ಲಿವೆ. ತನ್ನ ರಗಳೆಗಳಲ್ಲಿ ಮಾತ್ರವಲ್ಲದೆ, ಶತಕವೆಂಬ ಮತ್ತೊಂದು ಕಾವ್ಯಪ್ರಕಾರದಲ್ಲಿಯೂ ಹರಿಹರನು ಹೊಸತನವನ್ನು ಸಾಧಿಸಿ 'ರಕ್ಷಾಶತಕ' ಮತ್ತು 'ಪಂಪಾಶತಕ'ಗಳನ್ನು ರಚಿಸಿದ್ದಾನೆ.

ಹರಿಹರನ ರಗಳೆಗಳೇ ಆಗಲಿ, ಶತಕಗಳೇ ಆಗಲಿ, ಅವುಗಳ ಆದಿ ಅಂತ್ಯ ಮಧ್ಯ ಎಲ್ಲವೂ ಭಕ್ತಿ ಹಾಗೂ ವೈರಾಗ್ಯಗಳಿಂದ ತುಂಬಿವೆ. 'ನೀನಹರ್ನಿಶಂ ನೆನೆ ನಿಚ್ಚಂ ಪೊಗಳು ಪೆಂಪಿನ ಹಂಪೆಯಾಳ್ದನಂ' ಎಂದು ಎಲ್ಲ ವಿಧವಾದ ಅರ್ಚನೆ, ಆರಾಧನೆ, ಸಮರ್ಪಣೆಗಳಿಗೆ ಯೋಗ್ಯನಾದವನು ಪರಮಾತ್ಮನೆಂಬ ಭಾವದಿಂದ 'ಶರಣಾರ್ ನೀಂ, ಕಾವರಾರ್ ನೀಂ... ಜನನೀ

ಜನಕರಾರ್ ನೀಂ... ಎನಗತಿಹಿತರಾರ್ ನೀಂ' ಎಂದು ತನ್ನ ವ್ಯಕ್ತಿತ್ವವನ್ನು ದೇವರ ರಕ್ಷಣೆಗೆ ಒಪ್ಪಿಸುತ್ತಾನೆ. ಕಾರಣ ಆ ಪರಮಾತ್ಮನು,

ಭಕ್ತರ ಬಂಧು ಭಕ್ತರ ಮಹಾನಿಧಿ ಭಕ್ತರ ಭಾವಸಂಪದಂ
ಭಕ್ತರ ಮಾತೆ ಭಕ್ತರ ಪಿತಂ ನಿಜಭಕ್ತರ ಪುಣ್ಯದೆಳ್ತರಂ।
ಭಕ್ತರ ಮೂರ್ತಿ ಸುಧಾಂಬುಧಿ ಭಕ್ತರ ಜೀವದುನ್ನತಂ
ಭಕ್ತರ ಪೆಂಪು ಭಕ್ತರ ಜನಕಂ
ನೆರೆ ಹಂಪೆಯ ದೇವನೊಚ್ಚತಂ ॥

ಹರಿಹರನು ಭಾವದ ಆವೇಗ ಭಕ್ತಿಯ ಉತ್ಕಂಠತೆಯಿಂದ ದೇವರನ್ನು ಆತ್ಮೀಯತೆಯಿಂದ ಸಂಬೋಧಿಸುವ ರೀತಿ ಓದುಗರನ್ನು ಮೋಡಿ ಮಾಡಿಬಿಡುತ್ತದೆ:

ಎನ್ನಾನಂದಾಬ್ಧಿಯೇ ಎನ್ನನುಮಪಸುಧೆಯೇ
ಎನ್ನ ಪುಣ್ಯಸ್ವರೂಪವೇ
ಎನ್ನಾಯುಃಪುಂಜವೇ ಎನ್ನಯ ಗತಿಮತಿಯೇ
ಎನ್ನ ವಿಜ್ಞಾನಮೂರ್ತೀ।
ಎನ್ನತ್ಯಾಶ್ಚರ್ಯವೇ ಎನ್ನತಿಶಯ ಗುರುವೇ
ಎನ್ನ ಚೈತನ್ಯದಾಗೇ
ಎನ್ನ ಪ್ರಾಣೇಶ ಪಂಪಾಪುರದರಸ
ವಿರೂಪಾಕ್ಷ ರಕ್ಷಿಪ್ಪುದೆನ್ನಂ ॥

ಭಕ್ತಿಭಾವದ ಬೆಳವಣಿಗೆ ಯಥಾರ್ಥವಾಗಿ ಹೇಗೆ ಆಗುತ್ತದೆ ಎಂಬುದನ್ನು ಹರಿಹರನ ಹೃದಯವನ್ನು ಸಾಂದ್ರವಾಗಿ ಪರಿಚಯಿಸುವ ಒಂದು ಸರಳ ನಿರೂಪಣೆಯಲ್ಲಿ ಕಾಣಬಹುದು:

ಬಿಡೆನೀಶಾ ನಿಮ್ಮ ಪಾದಾಬ್ಜವನೆಲೆಲೆ ಬಿಡೆಂ
ಸೀಳ್ದೊಡಂ ಪೋಳ್ದೊಡಂ ಪೊ
ಯ್ದೊಡಂ ಮುದದಿಂದೆಂತುಂ ಬಿಡೆನಭವ ಬಿಡ
ಶಂಕರಾ ಮಾಣೆ ನಾಂ ಬಲ್।
ವಿಡಿದೆಂ ಮತ್ತತ್ತಮಿತ್ತಂ ಚಲಿಯಿಸದಲೆ ಮತ್
ಸ್ವಾಮಿ ನಿಮ್ಮಾಜ್ಞೆಯಿಂದ
ಮೃಡನೇ ಭಕ್ತಾರ್ಥಿ ಪಂಪಾಪುರದರಸ
ವಿರೂಪಾಕ್ಷ ರಕ್ಷಿಪ್ಪುದೆನ್ನಂ ॥

ಹರಿಹರನ ಪ್ರಸಿದ್ಧವಾದ ಒಂದು ಕೃತಿಯೆಂದರೆ 'ಗಿರಿಜಾ ಕಲ್ಯಾಣ.' ಇದು ಪ್ರೌಢ ಚಂಪೂ ಪರಂಪರೆಯಲ್ಲಿ ರಚಿತವಾದ ಕಾವ್ಯ. ತನ್ನ ಕಾಲದ ಸಾಹಿತ್ಯಕ್ಕೆ ಸೀಮಾಪುರುಷನಾಗಿದ್ದ ಹರಿಹರ ಕನ್ನಡ ಸಾಹಿತ್ಯ ಮಂದಿರದ ಚಿನ್ನದ ಕಲಶಗಳಲ್ಲಿ ಒಬ್ಬನಾಗಿ ಕನ್ನಡ ಜನತೆಯ ಹೆಮ್ಮೆಯ ಕೀರ್ತಿಸ್ತಂಭವಾಗಿದ್ದಾನೆ. ಈತನ ಜೀವನದ ಘಟನೆಗಳನ್ನು ಹಾಗೂ ವೈಯಕ್ತಿಕ ವಿವರಗಳನ್ನು ಈತನ ಶತಕಗಳಲ್ಲಿ ಕಂಡುಬರುವ ಆತ್ಮನಿರೂಪಣೆಯಿಂದ ಊಹಿಸಬಹುದಲ್ಲದೆ ವ್ಯಕ್ತ ಐತಿಹಾಸಿಕ ದಾಖಲೆಗಳಿದ್ದಂತೆ ಕಾಣುವುದಿಲ್ಲ. ತನ್ನ ರಗಳೆಗಳು, ಶತಕಗಳು ಹಾಗೂ ಚಂಪೂ ಕಾವ್ಯಗಳ ಮೂಲಕ ಕನ್ನಡ ಸಾರಸ್ವತ ಪ್ರಪಂಚಕ್ಕೆ ಹರಿಹರನು ಅಮೂಲ್ಯವಾದ ಕೊಡುಗೆಯನ್ನಿತ್ತಿದ್ದಾನೆ. ✪

'ನಮ್ಮ ಜೀವನಗಳೇ ಉಪನಿಷತ್ತುಗಳು.....'

ಒಂದು ದಿನ ಸ್ವಾಮಿ ಕಮಲೇಶ್ವರಾನಂದರು ಶಿವಾನಂದರಿಗೆ "ನಾನು ನಿಮ್ಮೊಡನೆ ಉಪನಿಷತ್ತುಗಳನ್ನು ಅಧ್ಯಯನ ಮಾಡಬೇಕೆಂದಿದ್ದೇನೆ" ಎಂದರು. ಅದಕ್ಕೆ ಶಿವಾನಂದರು, "ನೀನು ನಮ್ಮ ಜೀವಿತಗಳನ್ನು ಅಧ್ಯಯನ ಮಾಡಬಲ್ಲೆಯಾ? ನಮ್ಮ ಜೀವನಗಳೇ ಉಪನಿಷತ್ತುಗಳು. ಇಲ್ಲಿ ನೀನು ಶ್ರುತಿಗಳ ಸಾರಸರ್ವಸ್ವವನ್ನೂ ಕಾಣುವೆ... ಶ್ರೀರಾಮಕೃಷ್ಣರಿಂದ ನಾವು ಪಡೆದ ಬೆಳಕನ್ನೇ ನಿನ್ನೊಡನೆ ಹಂಚಿಕೊಳ್ಳುತ್ತಿದ್ದೇನೆ. ಒಂದು ದೀಪದ ಜ್ವಾಲೆ ಇನ್ನೊಂದು ದೀಪವನ್ನು ಬೆಳಗುವುದು—ಹೀಗೆ ನಾವೆಲ್ಲರೂ ಪರಸ್ಪರ ಸಂಬಂಧಿಸಿರುವೆವು" ಎಂದರು.

ಸ್ವಾಮಿ ಸತ್‌ಪ್ರಕಾಶಾನಂದರು ಸ್ಮರಿಸಿಕೊಂಡಿದ್ದಾರೆ: "ಒಂದು ಸಲ ಬೇಲೂರು ಮಠದಲ್ಲಿ ನಡೆದಾಡುತ್ತಿದ್ದಾಗ ನಾನು ಮಹಾಪುರುಷಜಿಯವರನ್ನು ಕೇಳಿದೆ: 'ಮಹಾರಾಜ್, ಕೆಲವರು ಶ್ರೀಮಾತೆಯವರಿಂದಲೂ ಇನ್ನು ಕೆಲವರು ಸ್ವಾಮಿ ಬ್ರಹ್ಮಾನಂದರಿಂದಲೂ ದೀಕ್ಷೆ ತೆಗೆದುಕೊಂಡಿರುವರು. ಇವುಗಳಲ್ಲಿ ವ್ಯತ್ಯಾಸ ವೇನಾದರೂ ಇದೆಯೆ?' ಅದಕ್ಕೆ ಅವರು 'ಇಲ್ಲ, ನನಗೇನೂ ವ್ಯತ್ಯಾಸ ಕಾಣಿಸುವುದಿಲ್ಲ—ಒಂದೇ ಗಂಗಾಜಲವು ಎರಡು ನಲ್ಲಿಗಳಲ್ಲಿ ಬರುವ ಹಾಗೆ ಇದು. ಶ್ರೀರಾಮಕೃಷ್ಣರ ಕೃಪೆಯೇ ಶ್ರೀಮಾತೆಯವರ ಹಾಗೂ ಬ್ರಹ್ಮಾನಂದರ ಮೂಲಕ ಹರಿಯುತ್ತಿರುವುದು; ಒಂದೇ ವಸ್ತು, ಎರಡು ಪಾತ್ರೆಗಳಲ್ಲಿರುವುದು. ಆದರೆ ನೋಡಿಲ್ಲಿ, ದೀಕ್ಷೆ *ತೆಗೆದುಕೊಳ್ಳುವುದು* ಎಂದೆಯಲ್ಲಾ, ಏನು ಅದರ ಅರ್ಥ? ದೀಕ್ಷೆಯನ್ನು ಅವರು *ಪಡೆಯುತ್ತಾರೆ*, ದೀಕ್ಷೆ *ಕೊಡಲ್ಪಡುತ್ತದೆ*.' ಎಂದು ಸ್ಪಷ್ಟಪಡಿಸಿದರು."



ಸ್ವಾಮಿ ಶಿವಾನಂದ